# ಎಚ್ಚರ ಎಚ್ಚರ

ಹೆಚ್ಚಾಗಿದೆ ಈಗ ಎಲ್ಲಾ ಕಡೆಗಳಲ್ಲಿ
ಹುಚ್ಚು ನಾಯಿಗಳ ಹಾವಳಿ
ಅಲೆಯುತ್ತವೆ ಮುಖ್ಯರಸ್ತೆಯಲ್ಲಿ
ಅಡ್ಡರಸ್ತೆಯಲ್ಲಿ ಗಲ್ಲಿಗಲ್ಲಿಗಳಲ್ಲಿ
ಎಲ್ಲೆಂದರಲ್ಲಿ ಸುರಿಸುತ್ತ ಜೊಲ್ಲು
ತೋರಿಸುತ್ತ ಎರಡು ಕೋರೆಹಲ್ಲು

ಬೊಗಳಿ ಬೊಗಳಿ ಕಡೆಗೆ ಕಚ್ಚುತ್ತದೆ
ಸುಳ್ಳಾಗಿದೆ ನಿಮ್ಮ ಹಳೆಯ ಗಾದೆ!
ಎಚ್ಚರ ಗೆಳೆಯರೆ ಹುಷಾರಾಗಿರಿ
ಸುತ್ತಮುತ್ತ ಗಮನಿಸುತ್ತ ನಡೆಯಿರಿ
ಕಾರಿನ ಚಕ್ರ, ಲೈಟ್ ಕಂಬ, ಗೋಡೆ
ಕಂಡಾಗಲೆಲ್ಲ ಎತ್ತುವುದು ಕಾಲು

ಆಗಾಗ ಚೆಕ್ ಮಾಡಿ ಫೇಸ್‌ಬುಕ್ ವಾಲು
ಹುಚ್ಚು ನಾಯಿ ಉಚ್ಚೆ ಹೊಯ್ಯುತ್ತೆ ಅಲ್ಲೂ





# ಅನುಮಾನ

ದಿನವೂ ಮುಂಜಾನೆ ಬೆಕ್ಕಿಗೆ ನಾನೇ
ಹಾಕುತ್ತೇನೆ ಉಗುರು ಬೆಚ್ಚಗಿನ ಹಾಲು
ತಡವಾದರೆ ಮಿಯಾಂ ಎನ್ನುತ್ತ
ಒಳಬಂದು ಸಲ್ಲಿಸುತ್ತದೆ ಅಹವಾಲು

ಹಾಲು ಸುರಿಯುವಾಗ ಬೆಕ್ಕಿನ ತಟ್ಟೆಗೆ
ನೋಡಬೇಕು ಅದರ ಖುಷಿ ಉಲ್ಲಾಸ
ಕುಡಿಯುತ್ತದೆ ಕಣ್ಣು ಮುಚ್ಚಿಕೊಂಡು
ಇಟ್ಟು ನನ್ನ ಮೇಲೆ ಸಂಪೂರ್ಣ ವಿಶ್ವಾಸ

ಕೇಳಿಸುತ್ತದೆ ಸದ್ದು ಪಚ ಪಚ ಪಚ್ಚ
ಕ್ಷಣಾರ್ಧದಲ್ಲಿ ಹಾಲಿನ ಪಾತ್ರೆ ಸ್ವಚ್ಛ
ಇಂದು ಮಾತ್ರ ಪೂರ್ತಿ ಕುಡಿಯದೆ
ನನ್ನನ್ನೇ ಏಕೆ ದಿಟ್ಟಿಸಿ ನೋಡುತ್ತಿದೆ?

ಕಾಡುತ್ತಿದೆ ಅಪರಾಧಿ ಪ್ರಜ್ಞೆ, ಅನುಮಾನ
ಹೆಚ್ಚಾಯಿತೆ ಬೆರೆಸಿದ ನೀರಿನ ಪ್ರಮಾಣ?

● ಎಚ್. ಡುಂಡಿರಾಜ್